## ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
## KARNATAKA LEGISLATIVE ASSEMBLY, RESEARCH AND REFERENCE BRANCH

### ಪತ್ರಿಕಾ ತುಣುಕುಗಳು
### PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 13/2/12

# 'ನಾನು ಹೆಡ್ ಮಾಸ್ತರ್ ಕೆಲ್ಸಾ ಮಾಡ್ತೇನೆ'

**ಹುಬ್ಬಳ್ಳಿ:** 'ಪರಿಷತ್ ಹೆಡ್ ಮಾಸ್ತರ್ ಆಗಿ ನಾನು ಕೆಲಸ ಮಾಡುತ್ತೇನೆ'

ವಿಧಾನ ಪರಿಷತ್ ನೂತನ ಸಭಾಪತಿ ಬಸವರಾಜ ಹೊರಟ್ಟಿ ಅವರು ಸಭಾಪತಿ ಆದ ಬಳಿಕ ಪ್ರಥಮ ಬಾರಿಗೆ ಹುಬ್ಬಳ್ಳಿ ನಗರಕ್ಕೆ ಶುಕ್ರವಾರ ಭೇಟಿ ನೀಡಿದ ವೇಳೆ ಹೇಳಿದ ಮಾತು.



ಅಭಿಮಾನಿಗಳ ಅದ್ಧೂರಿ ಸ್ವಾಗತದ ನಡುವೆ ಹೆಜ್ಜೆ ಹಾಕಿದ ಅವರು ಮಾಧ್ಯಮದವರೊಂದಿಗೆ ಮಾತನಾಡಿದರು.

ಸದನ ಹೇಗೆ ನಡೆಸಬೇಕು ಎನ್ನುವ ಕುರಿತು ಪ್ರತಿ ವಾರ ಎಲ್ಲ ಪಕ್ಷಗಳ ನಾಯಕ ಜೊತೆಗೆ ಸಭೆ ನಡೆಸುತ್ತೇನೆ. ಅಲ್ಲದೇ ಎಲ್ಲ ಸದಸ್ಯರಿಗೂ ಪತ್ರ ಬರೆದು ಶಿಸ್ತಿನ ಪಾಠ ಹೇಳಿ ಕೊಡುತ್ತೇನೆ. ಸದನವನ್ನು ಶಿಸ್ತಿನಿಂದ ನಡೆಸುತ್ತೇನೆ ಎಂದರು.

ವಿಧಾನಪರಿಷತ್‌ನಲ್ಲಿ ಡಿ.15 ರಂದು ನಡೆದ ಕಹಿ ಘಟನೆ ಮರೆತು ಇನ್ನು ಮುಂದೆ ಆ ರೀತಿ ಆಗದಂತೆ ಶಿಸ್ತಿನಿಂದ ಅಧಿವೇಶನ ನಡೆಸಲಾಗುತ್ತದೆ ಎಂದು ಹೇಳಿದರು.

**ಸುವರ್ಣಸೌಧಕ್ಕೆ ಕಚೇರಿ ಶಿಫ್ಟ್**

ಬೆಳಗಾವಿಯಲ್ಲಿ ಅಧಿವೇಶನ ನಡೆಸುವಂತೆ ಹಾಗೂ ಸರ್ಕಾರ ನಿರ್ಧರಿಸಿರುವ ರಾಜ್ಯ ಮಟ್ಟದ ಕಚೇರಿಗಳನ್ನು ಬೆಳಗಾವಿಯ ಸುವರ್ಣ ಸೌಧಕ್ಕೆ ಶಿಫ್ಟ್ ಮಾಡಲು ಸರ್ಕಾರಕ್ಕೆ ಸೂಚಿಸಲಾಗುವುದು. ವಿಧಾನ ಪರಿಷತ್. ಚುನಾವಣೆಯಲ್ಲಿ ಸೋತವರ ಆಶ್ರಯತಾಣವಾಗಬಾರದು. ಇಂದಿನ ರಾಜಕೀಯದಲ್ಲಿ ಅದು ಆಗಿದೆ ಎಂದರು.

ಸಭಾಪತಿ ಸ್ಥಾನಕ್ಕೆ ಯಾರಿಗೂ ಸ್ವತಂತ್ರವಾಗಿ ಆಯ್ಕೆಯಾಗಲು ಅವಕಾಶವಿರಲಿಲ್ಲ. ಬಿಜೆಪಿ ನಮಗೆ ಒಳ್ಳೆಯ ಉದ್ದೇಶದಿಂದ ಬೆಂಬಲ ನೀಡಿದೆ ಎಂದರು.

ಮೂರುಸಾವಿರಮಠದ ಆಸ್ತಿ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 2007ರಲ್ಲಿ ಸಿ.ಎಂ. ಉದಾಸಿ ಮಂತ್ರಿ ಆಗಿದ್ದ ವೇಳೆ ಹಿಂದಿನ ಪೂಜ್ಯರ ಭಾವನೆಯಂತೆ ಕೆಎಲ್‌ಇ ಸಂಸ್ಥೆಗೆ ಭೂಮಿ ನೀಡಲಾಗಿದೆ. ಅಖಂಡ ಧಾರವಾಡ ಜಿಲ್ಲೆಯ ಶಾಸಕರು ಸೇರಿ ಮಠದ ಪೂಜ್ಯರ ಇಚ್ಛೆಯಂತೆ ಭೂಮಿ ಕೊಟ್ಟಿದ್ದೇವೆ ಎಂದರಲ್ಲದೇ ದಿಂಗಾಲೇಶ್ವರ ಶ್ರೀಗಳು ಪಾದಯಾತ್ರೆ ಮಾಡಲು ಸ್ವತಂತ್ರರು. ಅವರ ಬಗ್ಗೆ ನಾನೇನು ಮಾತಾಡೋದಿಲ್ಲ. ತಪ್ಪುಗಳಿದ್ದರೆ ತಿಳಿಸಲಿ, ಸರಿಪಡಿಸೋಣ ಎಂದರು.

## ಸಂದಿಗ್ಧ ಪರಿಸ್ಥಿತಿಯಲ್ಲಿ ಸಭಾಪತಿ ಸ್ಥಾನ

**ಹಾವೇರಿ:** ನಾನು ಸಭಾಪತಿ ಆಗಿದ್ದಕ್ಕೆ ಶಿಕ್ಷಕರಿಗೆ ಮಾತ್ರವಲ್ಲ, ಇಡೀ ಉತ್ತರ ಕರ್ನಾಟಕ ಭಾಗಕ್ಕೆ ಬಹಳ ಖುಷಿ, ಹೆಮ್ಮೆಯಾಗಿದೆ ಎಂದು ವಿಧಾನ ಪರಿಷತ್‌ನ ನೂತನ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಇಲ್ಲಿನ ಹುಕ್ಕೇರಿಮಠಕ್ಕೆ ಭೇಟಿ ಸದಾಶಿವ ಶ್ರೀಗಳಿಂದ ಆಶೀರ್ವಾದ ಪಡೆದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ಸಂದಿಗ್ಧ ಪರಿಸ್ಥಿತಿಯಲ್ಲಿ ಸಭಾಪತಿ ಸ್ಥಾನ ಸಿಕ್ಕಿದೆ. ಅದನ್ನು ಸಮರ್ಥವಾಗಿ ನಿಭಾಯಿಸಿಕೊಂಡು ಹೋಗುತ್ತೇನೆ. ಕರ್ನಾಟಕ ಇತಿಹಾಸದಲ್ಲಿ ಹೊರಟ್ಟಿ ಇಂಥಾ ಕಾಲದಲ್ಲಿ ಸಭಾಪತಿಯಾಗಿದ್ದರು ಎನ್ನುವಂತೆ ಕೆಲಸ ಮಾಡಿ ತೋರಿಸೋ ಬಗ್ಗೆ ಚಾಲೆಂಜ್ ಆಗಿ ತಗೊಂಡಿದ್ದೇನೆ ಎಂದರು.